All India Radio: Bangalore
National Bulletin In Kannada
26.01.2025 19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ದೇಶಾದ್ಯಂತ ಸಂಭ್ರಮದ ಗಣರಾಜ್ಯೋತ್ಸವ ಆಚರಣೆ ; ದೆಹಲಿಯ ಕರ್ತವ್ಯ ಪಥದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಗೌರವ ರಕ್ಷೆ ಸ್ವೀಕಾರ
- ಗಣರಾಜ್ಯ ದಿನದ ಪಥಸಂಚಲನ ದೇಶದ ವೈವಿಧ್ಯತೆಯಲ್ಲಿನ ಏಕತೆಯ ಪ್ರತೀಕ - ಪ್ರಧಾನಮಂತ್ರಿ ನರೇಂದ್ರ ಮೋದಿ
- ಬಾಂಗ್ಲಾದೇಶಕ್ಕೆ ಅಮೆರಿಕದ ಯುಎಸ್ಎಐಡಿ ನೆರವು ಸ್ಥಗಿತ
- ಹಮಾಸ್-ಇಸ್ರೇಲ್ ನಡುವೆ ಖೈದಿ-ಒತ್ತೆಯಾಳು ವಿನಿಮಯ ; ೨ನೇ ಹಂತ ಪೂರ್ಣ
- ಐಸಿಸಿ ಅಂಡರ್ ೧೯ ಮಹಿಳಾ ಟಿ-೨೦ ವಿಶ್ವಕಪ್ ; ಸೆಮಿಫೈನಲ್ಸ್‌ಗೆ ಭಾರತದ ತಂಡ

<><><><>

ದೇಶದ ೭೬ನೇ ಗಣರಾಜ್ಯೋತ್ಸವವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ನೇತೃತ್ವದಲ್ಲಿ ಇಂದು ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ನವದೆಹಲಿಯ ಕರ್ತವ್ಯ ಪಥದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಅತಿಥಿ ಇಂಡೋನೇಷ್ಯಾದ ಅಧ್ಯಕ್ಷ ಪ್ರಭಾವೋ ಸುಬಿಯಾಂತೊ ಅವರೊಂದಿಗೆ ಆಗಮಿಸಿ ವಿವಿಧ ರಕ್ಷಣಾ ಪಡೆಗಳಿಂದ ಗೌರವ ರಕ್ಷೆ ಸ್ವೀಕರಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದ ನಂತರ ಗಣರಾಜ್ಯೋತ್ಸವ ಪರೇಡ್‌ಗೆ ಚಾಲನೆ ದೊರೆಯಿತು. ಈ ಬಾರಿಯ ಗಣರಾಜ್ಯೋತ್ಸವದ ಪಥಸಂಚಲನದ ಪರೇಡ್ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಭವನೀಶ್ ಕುಮಾರ್ ನೇತೃತ್ವದಲ್ಲಿ ಕರ್ತವ್ಯ ಪಥದಲ್ಲಿ ಆರಂಭಗೊಂಡ ಪಥಸಂಚಲನದಲ್ಲಿ ಭೂಸೇನೆ, ವಾಯುಸೇನೆ, ನೌಕಾಸೇನೆ, ಗಡಿರಕ್ಷಣಾ ಪಡೆ, ಅರೆ ಸೇನಾಪಡೆ ಸೇರಿದಂತೆ ವಿವಿಧ ಸೇನಾಪಡೆಗಳು ಪಾಲ್ಗೊಂಡು ದೇಶದ ಶಕ್ತಿ-ಸಾಮರ್ಥ್ಯವನ್ನು ಅನಾವರಣಗೊಳಿಸಿದವು. ಈ ಸಂದರ್ಭದಲ್ಲಿ ಸಾಂಸ್ಕೃತಿಕ ನೃತ್ಯ ಪ್ರದರ್ಶನ ನಡೆಯಿತು.

ಧ್ವನಿ : ನೃತ್ಯ ಹಾಡು

ಪಥಸಂಚಲನದಲ್ಲಿ ಟ್ಯಾಂಕ್ ಟಿ-೯೦- ಭೀಷ್ಮ, ನಾಗ ಕ್ಷಿಪಣಿ ವ್ಯವಸ್ಥೆ, ಬ್ರಹ್ಮೋಸ್, ಪಿನಾಕ ಮಲ್ಟಿ ಲಾಂಚರ್ ರಾಕೆಟ್ ಸಿಸ್ಟಮ್ ಸೇರಿದಂತೆ ಡಿಆರ್‌ಡಿಒ ದ ಪ್ರಳಯ್ ವೆಪನ್ ಸಿಸ್ಟಮ್ ಗಮನ ಸೆಳೆಯಿತು. ಇದೇ ವೇಳೆ ಇಂಡೋನೇಷಿಯಾದ ೧೬೦ ಯೋಧರ ತುಕಡಿ ಮತ್ತು ೧೯೦ ಸದಸ್ಯರ ಬ್ಯಾಂಡ್ ತುಕಡಿ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದವು. ವಿವಿಧ ಪಡೆಗಳ ಪಥಸಂಚಲನದ ಬಳಿಕ ಸುವರ್ಣಭಾರತ; ಪರಂಪರೆ ಮತ್ತು ವಿಕಾಸ ಎಂಬ ಧ್ಯೇಯವಾಕ್ಯದೊಂದಿಗೆ ಸ್ತಬ್ಧಚಿತ್ರಗಳ ಮೆರವಣಿಗೆ ಆರಂಭವಾಯಿತು. ಮೆರವಣಿಗೆಯಲ್ಲಿ ಮೊದಲಿಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಸ್ತಬ್ಧಚಿತ್ರ, ಬಳಿಕ ವಿವಿಧ ಕೇಂದ್ರ ಸರ್ಕಾರದ ಸಚಿವಾಲಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಆಯ್ದ ರಾಜ್ಯಗಳ ಸ್ತಬ್ಧಚಿತ್ರಗಳು ನೆರೆದಿದ್ದ ಎಲ್ಲರ ಗಮನ ಸೆಳೆದವು. ಕರ್ನಾಟಕದಿಂದ ವಿಶೇಷವಾಗಿ 'ಲಕ್ಕುಂಡಿ ಶಿಲ್ಪಕಲೆಯ ತೊಟ್ಟಿಲು ಸ್ತಬ್ಧ ಚಿತ್ರ ಅನಾವರಣಗೊಂಡಿತು. ಆಂಧ್ರಪ್ರದೇಶ ಎಟಿಕೊಪ್ಪಕ ಮರದ ಆಟಿಕೆಗಳು, ಪಂಜಾಬ್‌ನಿಂದ ಶ್ರೀಮಂತ ಕರಕುಶಲ ಕಲೆ, ಉತ್ತರಪ್ರದೇಶದಿಂದ ಮಹಾಕುಂಭಮೇಳ, ಮಧ್ಯಪ್ರದೇಶದಿಂದ ಚಿರತೆಗಳ ಕುರಿತ ಸ್ತಬ್ಧಚಿತ್ರ ಸೇರಿದಂತೆ ಹಲವು ರಾಜ್ಯಗಳು ತಮ್ಮ ತಮ್ಮ ರಾಜ್ಯಗಳ ವೈಶಿಷ್ಟ್ಯತೆಯನ್ನು ಪತಿಬಿಂಬಿಸುವ ವಿಷಯಗಳ ಕುರಿತ ಸ್ತಬ್ಧಚಿತ್ರಗಳನ್ನು ಅನಾವರಣಗೊಳಿಲಾಯಿತು. ೫ ಜಾಗ್ವರ್ ವಿಮಾನಗಳಿಂದ ಆಗಸದಲ್ಲಿ ಬಾಣದ ಆಕೃತಿ ರಚನೆ, ೨೨ ಯುದ್ಧ ವಿಮಾನಗಳು, ೭ ಸೇನಾ ಹೆಲಿಕಾಪ್ಟರ್‌ಗಳಿಂದ ಸಾಹಸ ಪ್ರದರ್ಶನ, ೩ ಸುಖೋಯ್-೩೦ ಜೆಟ್‌ಗಳಿಂದ ತ್ರಿಶೂಲ ಆಕಾರದ ಪ್ರದರ್ಶನ, ೨೦೦ ಕಿಲೋಮೀಟರ್ ವೇಗದಲ್ಲಿ ೬ ರಫೆಲ್ ವಿಮಾನಗಳಿಂದ ವಜ್ರಾಂಗ ಆಕೃತಿ ಪ್ರದರ್ಶನ ಪ್ರಮುಖವಾಗಿ ಗಮನ ಸೆಳೆಯಿತು. ದೇಶದ ಸೇನಾಬಲವನ್ನು ಪ್ರದರ್ಶಿಸಿದ ಪಥಸಂಚಲನ ಮತ್ತು ಸಾಂಸ್ಕೃತಿ ಪರಂಪರೆ ಮತ್ತು ವೈವಿಧ್ಯತೆಯನ್ನು ಸಾರಿದ ಸ್ತಬ್ಧಚಿತ್ರಗಳ ಮೆರವಣಿಗೆ ಮನಮೋಹಕವಾಗಿತ್ತು.

<><><><>

ಗಣರಾಜ್ಯ ದಿನದ ಪಥಸಂಚಲನ ದೇಶದ ವೈವಿಧ್ಯತೆಯಲ್ಲಿನ ಏಕತೆಯ ಪ್ರದರ್ಶನವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಈ ಪ್ರದರ್ಶನವು ದೇಶದ ಸಾಂಸ್ಕೃತಿಕ ಪರಂಪರೆ ಹಾಗೂ ಸೈನಿಕ ಸಾಮರ್ಥ್ಯವನ್ನು ಸಾದರಪಡಿಸಿದೆ. ಸ್ತಬ್ಧ ಚಿತ್ರಗಳು ನಮ್ಮ ರಾಜ್ಯಗಳ ಶ್ರೀಮಂತ ಸಂಸ್ಕೃತಿಯನ್ನು ಪ್ರತಿನಿಧಿಸಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಮಂತ್ರಿಯವರು ತಿಳಿಸಿದ್ದಾರೆ.

<><><><>

ಅಮೆರಿಕದಿಂದ ನೆರವು ನೀಡುವ ಯುಎಸ್‌ಎಐಡಿ ಸಂಸ್ಥೆಯು ಬಾಂಗ್ಲಾದೇಶಕ್ಕೆ ನೀಡುತ್ತಿರುವ ಎಲ್ಲ ನೆರವಿನ ಉಪಕ್ರಮವನ್ನು ಅಮಾನತ್ತುಗೊಳಿಸಿದೆ. ಬಾಂಗ್ಲಾದೇಶದಲ್ಲಿ ಗುತ್ತಿಗೆ ಕಾರ್ಯ ಆದೇಶ, ಅನುದಾನ, ಸಹಕಾರಿ ಒಪ್ಪಂದ ಹೀಗೆ ಯಾವುದೇ ನಮೂನೆಯಡಿ ನಡೆಯುತ್ತಿರುವ ಎಲ್ಲ ಕಾರ್ಯಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಲ್ಲಿಸಬೇಕೆಂದು ಸಂಸ್ಥೆ ಆದೇಶಿಸಿದೆ.

<><><><>

ಈ ಬಾರಿಯ ಪದ್ಮಪ್ರಶಸ್ತಿಗಳಿಗೆ ಕರ್ನಾಟಕದ ೯ ಸಾಧಕರನ್ನು ಆಯ್ಕೆ ಮಾಡಲಾಗಿದೆ. ವಯೋಲಿನ್ ವಾದಕ ಎಲ್.ಸುಬ್ರಮಣ್ಯಂ ಅವರು ಪದ್ಮವಿಭೂಷಣಕ್ಕೆ ಭಾಜನರಾಗಿದ್ದರೆ, ಕನ್ನಡದ ಚಲನಚಿತ್ರ ರಂಗದ ಹಿರಿಯ ನಟ ಅನಂತನಾಗ್ ಪದ್ಮಭೂಷಣ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅವರೊಂದಿಗೆ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಪ್ರಸಾರ ಭಾರತಿ ಮಾಜಿ ಅಧ್ಯಕ್ಷ ಎ.ಸೂರ್ಯಪ್ರಕಾಶ್ ಅವರು ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಹಾಸನದ ಅರಕಲಗೂಡು ಮೂಲದ ಹಿರಿಯ ಪರ್ತಕರ್ತ ಎ ಸೂರ್ಯ ಪ್ರಕಾಶ್ ಅವರಿಗೆ ಪದ್ಮ ಭೂಷಣ ಪ್ರಶಸ್ತಿ ದೊರೆತಿದೆ. ಅವರು ಪ್ರಸಾರ ಭಾರತಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಆಕಾಶವಾಣಿಯೊಂದಿಗೆ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

ಧ್ವನಿ : ಸೂರ್ಯ ಪ್ರಕಾಶ್ (೩೫ ಸೆಕೆಂಡ್ಸ್)

ಎಂದಿನಂತೆ ಈ ಬಾರಿಯೂ ಪದ್ಮಪ್ರಶಸ್ತಿಗಳಿಗಾಗಿ ಕೇಂದ್ರ ಸರ್ಕಾರ ತೆರೆಮರೆಯ ಸಾಧಕರನ್ನು ಆಯ್ಕೆ ಮಾಡಿದ್ದು, ಕಲೆಯ ಕ್ಷೇತ್ರದಲ್ಲಿ ತೊಗಲು ಗೊಂಬೆಯಾಟ ಕಲಾವಿದರಾದ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೆಕ್ಯಾತಾರ, ಚಲನಚಿತ್ರ ನಿರ್ಮಾಪಕ ಹಾಸನ ರಘು, ವ್ಯಾಪಾರ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಪ್ರಶಾಂತ್ ಪ್ರಕಾಶ್, ಸಂಗೀತ ಕ್ಷೇತ್ರದಲ್ಲಿ ರಿಕ್ಕಿಕೇಜ್, ಜಾನಪದ ಕಲೆಗಾಗಿ ವೆಂಕಪ್ಪ ಅಂಬಾಜಿ ಸುಗಟೇಕಾರ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ.ವಿಜಯಲಕ್ಷ್ಮೀ ದೇಶಮಾನೆ ಕರ್ನಾಟಕದಿಂದ ಆಯ್ಕೆಯಾಗಿದ್ದಾರೆ.

<><><><>

ಹಮಾಸ್ ಮತ್ತು ಇಸ್ರೇಲ್ ನಡುವೆ ಖೈದಿ ಹಾಗೂ ಒತ್ತೆಯಾಳು ವಿನಿಮಯದ ೭ನೇ ಹಂತ ಪೂರ್ತಿಗೊಂಡಿದೆ. ರೆಡ್‌ಕ್ರಾಸ್‌ನ ಅಂತಾರಾಷ್ಟ್ರೀಯ ಸಮಿತಿ - ಐಸಿಆರ್‌ಸಿ ಈ ವಿಷಯ ಪ್ರಕಟಿಸಿದೆ. ಯುದ್ಧ ವಿರಾಮ ಒಪ್ಪಂದದ ಆರಂಭಿಕ ನಿಯಮಗಳಂತೆ ಈ ವಿನಿಮಯ ಜಾರಿಗೊಳಿಸಲಾಗಿದೆ. ೭ನೇ ಹಂತದಲ್ಲಿ ೧೦೦ ಪ್ಯಾಲಿಸ್ಟೇನ್ ಖೈದಿಗಳು ಮತ್ತು ೪ ಇಸ್ರೇಲಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗಿದೆ. ಐಸಿಆರ್‌ಸಿ ಸಮನ್ವಯದಲ್ಲಿ ಈ ಕಾರ್ಯ ನಡೆದಿದೆ.

<><><><>

ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು, ಗಣತಂತ್ರ ದಿನ ಪರೇಡ್‌ಗಾಗಿ ಆಗಮಿಸಿದ್ದ ವಿಶೇಷ ಅತಿಥಿಗಳೊಡನೆ ನವದೆಹಲಿಯ ಆಕಾಶವಾಣಿ ಭವನದಲ್ಲಿಂದು ಸಂವಾದ ನಡೆಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ತಿಳಿಸಿದಂತೆ ವಿಶೇಷ ಅತಿಥಿಗಳು ಸಮಾಜಕ್ಕಾಗಿ ಅವಿರತ ಸೇವೆ ಸಲ್ಲಿಸಿದ್ದಾರೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು. ಆಕಾಶವಾಣಿ ಸುದ್ದಿವಿಭಾಗದೊಂದಿಗೆ ಮಾತನಾಡಿದ ಅಶ್ವಿನಿ ವೈಷ್ಣವ್, ಪ್ರಧಾನಮಂತ್ರಿಯವರು ಮನ್ ಕಿ ಬಾತ್ ಕಾರ್ಯಕ್ರಮದ ಮೂಲಕ ಈ ಸಾಧಕರು ಮಾಡಿದ ಸ್ಫೂರ್ತಿದಾಯಕ ಕೆಲಸವನ್ನು ಪಸರಿಸುವಂತೆ ಮಾಡಿದ್ದಾರೆ ಎಂದರು.

ಧ್ವನಿ : ಅಶ್ವಿನಿ ವೈಷ್ಣವ್ (೨೫ ಸೆಕೆಂಡ್ಸ್)

ಗಣತಂತ್ರ ದಿನದ ಪರೇಡ್ ವೀಕ್ಷಿಸಿದ ವಿಶೇಷ ಅತಿಥಿಗಳು ಆಕಾಶವಾಣಿಯೊಂದಿಗೆ ತಮ್ಮ ಅನುಭವವನ್ನು ಹಂಚಿಕೊಂಡರು. ಪ್ರಸಾರ ಭಾರತಿ ಅಧ್ಯಕ್ಷ ನವನೀತ್ ಸೆಹಗಲ್, ಆಕಾಶವಾಣಿ ಮಹಾ ನಿರ್ದೇಶಕಿ ಡಾ. ಪ್ರಾಗ್ಯಾ ಪಾಲಿವಾಲ್ ಗೌರ್ ಮತ್ತು ದೂರದರ್ಶನ ಮಹಾ ನಿರ್ದೇಶಕಿ ಕಾಂಚನ್ ಪ್ರಸಾದ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

<><><>

ಇಂದು ವಿವಿಧ ರಾಜ್ಯಗಳಲ್ಲಿ ಆಚರಿಸಲಾದ ಗಣರಾಜ್ಯೋತ್ಸವ ವರದಿ :

ಹರಿಯಾಣ ಮತ್ತು ಚಂಡೀಗಢದಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಫರಿದಾಬಾದ್‌ನಲ್ಲಿ ನಡೆದ ಪ್ರಮುಖ ಸಮಾರಂಭದಲ್ಲಿ ರಾಜ್ಯಪಾಲ ಬಂಡಾರು ದತ್ತಾತ್ರೆಯ ರಾಷ್ಟ್ರಧ್ವಜ ಹಾರಿಸಿ ಗೌರವ ರಕ್ಷೆ ಪಡೆದರು. ರೇವಾರಿಯಲ್ಲಿ ನಡೆದ ಸಮಾರಂಭದಲ್ಲಿ ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ತ್ರಿವರ್ಣಧ್ವಜ ರೋಹಣ ಮಾಡಿದರು. ಹಿಮಾಚಲಪ್ರದೇಶದ ಶಿಮ್ಲಾದಲ್ಲಿ ರಾಜ್ಯಪಾಲ ಶಿವಪ್ರತಾಪ್ ಶುಕ್ಲ ಧ್ವಜಾರೋಹಣ ಮಾಡಿದರು. ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಸೇರಿದಂತೆ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಗಿಲ್‌ನ ಬಿಯಾಮತಂಗ್‌ನ ಕ್ರಿಸುಲ್ತಾನ್ ಚೊ, ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಎಲ್‌ಎಹೆಚ್‌ಡಿಸಿ ಕಾರ್ಗಿಲ್‌ನ ಅಧ್ಯಕ್ಷ ಡಾ. ಮೊಹಮ್ಮದ್ ಜಫರ್, ಧ್ವಜಾರೋಹಣ ನೆರವೇರಿಸಿ ಕಾರ್ಗಿಲ್ ಭಾಗದ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳನ್ನು ವಿವರಿಸಿದರು.

<><><>

ಕೇಂದ್ರ ವಾಣಿಜ್ಯ ಮತ್ತು ಉದ್ದಿಮೆ ಖಾತೆ ಸಚಿವ ಪಿಯೂಶ್ ಗೋಯಲ್ ಅವರು, ಎರಡು ದಿನಗಳ ಬೇಟಿಗಾಗಿ ಒಮನ್ ನ ಮಸ್ಕತ್‌ಗೆ ತೆರಳಲಿದ್ದಾರೆ. ಅವರು, ನಾಳೆ ೧೧ನೇ ಜಂಟಿ ಆಯೋಗದ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಅವರು, ಅಲ್ಲಿನ ವಾಣಿಜ್ಯೋದ್ಯಮ ಸಚಿವರೊಂದಿಗೆ ಮಾತುಕತೆ ನಡೆಸುವ ಕಾರ್ಯಕ್ರಮವಿದೆ.

<><><><>

ಹಿರಿಯ ಹೃದ್ರೋಗತಜ್ಞ ಡಾ. ಚೆರಿಯನ್ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರಿಗೆ ೮೨ ವರ್ಷ ವಯಸ್ಸಾಗಿತ್ತು. ಡಾ. ಚೆರಿಯನ್ ನಿಧನಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ. ಡಾ. ಚೆರಿಯನ್ ಅವರು, ಸಲ್ಲಿಸಿದ ಸೇವೆ ಸ್ಮರಿಸಿದ್ದಾರೆ.

<><><><>

ಭಾರತ ಕೌಲಾಲಂಪುರ್ ನಲ್ಲಿ ನಡೆಯುತ್ತಿರುವ ೨೦೨೫ ರ ಐಸಿಸಿ ಅಂಡರ್-೧೯ ಮಹಿಳಾ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಸೆಮಿಫೈನಲ್ ಪ್ರವೇಶಿಸಿದೆ. ಬೆಯುಮಾಸ್ ಓವಲ್ ಕ್ರೀಡಾಂಗಣದಲ್ಲಿ ಇಂದು ನಡೆದ ಪಂದ್ಯದಲ್ಲಿ ಭಾರತದ ಮಹಿಳೆಯರ ತಂಡ ಬಾಂಗ್ಲಾದೇಶ ವಿರುದ್ಧ ೮ ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಬಾಂಗ್ಲಾದೇಶ ನಿಗದಿತ ೨೦ ಓವರ್‌ಗಳಲ್ಲಿ ೮ ವಿಕೆಟ್ ನಷ್ಟಕ್ಕೆ ೬೪ ರನ್ ಗಳಿಸಿತು. ಭಾರತ ತಂಡ ೭.೧ ಓವರ್‌ನಲ್ಲಿ ೨ ವಿಕೆಟ್ ನಷ್ಟಕ್ಕೆ ೬೬ ರನ್ ಮಾಡಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>